# ಗಣಪತ್ ಹೇಳಿದ ಕತೆ

ಹೀಗೇ ಒಂದಿನ ಅವನನ್ನ ಕೇಳಿಯೇ ಬಿಟ್ಟೆ, “ನೋಡು ಗಣಪತ್, ನಾನು ನಿನ್ ಬಗ್ಗೆ ತುಂಬಾ ತುಂಬಾ ಕತೆಗಳನ್ನ ಕೇಳಿದೀನಿ, ಅವುಗಳಲ್ಲಿ ಯಾವೆಲ್ಲ ನಿಜ ಅನ್ನೊದು ನನಗೆ ಗೊತ್ತಿಲ್ಲ.. ಅದ್ಹೋಗ್ಲಿ, ನಿನ್ಗೆ ಈ ಗೂನು ಬೆನ್ನು ಹ್ಯಾಗ್ ಬಂತು?”

“ಅದು ಬಾಳಾ ದೊಡ್ಡ ಕತೆ ಬಿಡ್ರಿ,” ನಾನು ಆಸಕ್ತಿ ತೋರಿದ್ದು ಅವನಿಗೆ ಖುಷಿಯಾಗಿತ್ತು. “ನೀವು ಅದನ್ನಂಬ್ತೀರೋ ಇಲ್ವೋ ಗೊತ್ತಿಲ್ಲ! ಅಲ್ದೇ ನಾನೇನು ಎಲ್ರ ಹತ್ರನೂ ಆ ಕತೇನಾ ಹೇಳ್ಕೋತಾನೂ ಕೂರೋದಿಲ್ಲ ನೋಡಿ!”

ನನ್ನ ಕೊತೂಹಲ ಕೆರಳಿಸಿ ಸುಮ್ಮನಾದ ಅವನನ್ನು ಮತ್ತೆ ಮಾತಿಗೆಳೆದೆ, “ನೋಡಪ್ಪ, ನೀನು ನಿನ್ ಕತೆ ಹೇಳಿದ್ರೆ ನಿಂಗೆ ನಾಕಾಣೆ ಕೊಡ್ತೀನಿ”

ತನ್ನ ಗಡ್ಡ ನೀವಿಕೊಳ್ಳುತ್ತ, ನನ್ನ ಭಕ್ಷೀಶನ್ನು ಒಪ್ಪಿಕೊಂಡು “ಸರಿ, ಹಂಗಾದ್ರೆ” ಅಂತಾ ಬಿಸಿಲಿನಲ್ಲಿ ಕುಕ್ಕರಗಾಲಿನಲ್ಲಿ ನನ್ನೆದುರು ಕುಳಿತೇಬಿಟ್ಟ, ನಾನು ವೋಟುಗೋಡೆಯ ನೆರಳಿಗೆ ಕುಕ್ಕರ ಕೂತೆ. “ಆದ್ರೆ ಇದೆಲ್ಲ ಇಪ್ಪತ್ವರ್ಷಕ್ಕೂ ಹಿಂದೆ ನಡೆದಿದ್ದು, ಎಲ್ಲನೂ ಸರಿಯಾಗಿ ಗ್ಯಾಪ್ಕಾ ಇಲ್ಲ, ನೋಡಿ ಮತ್ತೆ”

“ನಾನಾವಾಗ ಇನ್ನೂ ವಯಸ್ಸಿರೋ ಹುಡ್ಗ ಆಗಿದ್ದೆ, ಆಗ್ತಾನೇ ಮದುವೆಯಾಗಿತ್ತು. ಸುಮಾರೆಕರೆ ಬೇಸಾಯದ ಜಮೀನೂ ಇತ್ತು ಹಾಗಾಗಿ ತೀರಾ ಸ್ಥಿತಿವಂತರಲ್ಲದಿದ್ರೂ ಬಡತನವೇನೂ ಇರ್ಲಿಲ್ಲ. ಬೆಳೆ ಬಂದಾಗ ಎತ್ತಿನ ಗಾಡಿ ಹೂಡ್ಕೊಂಡು ಹಳ್ಳಿದಾರಿಲಿ ಐದು ಮೈಲಿ ದೂರ ಇರೋ ಸಂತೆಗೆ ಹೇರ್ಕೊಂಡ್–ಹೋಗಿ ಮಾರಾಟ ಮಾಡಿ ರಾತ್ರಿಯಂಗೆಲ್ಲ ವಾಪಸ್ ಬಂದ್ ಬಿಡ್ತಿದ್ದೆ.”

“ರಾತ್ರಿ ದಾರಿಲಿರೋ ಒಂದ್ ಅರಳೀಮರ ಹಾದು ಬರ್ತಿದ್ದೆ. ಎಲ್ರೂ ಆ ಅರಳೀಮರದಲ್ಲಿ ದೆಯ್ಯ ಇದೆ ಅಂತಿದ್ರು. ನಾನ್ಯಾವತ್ತೂ ನೋಡಿರ್ಲಿಲ್ಲ, ನಂಬ್ಯೂ ಇರ್ಲಿಲ್ಲ. ದೆಯ್ಯದ್ ಹೆಸ್ರು ಬಿಪಿನ್ ಅಂತೆ. ತುಂಬಾ ವರ್ಷಗಳ ಕೆಳಗೆ ಅವನನ್ನ ಯಾವ್ದೋ ಒಂದ್ ಡಕಾಯಿತರ ಗುಂಪು ಅದೇ ಅರಳೀಮರಕ್ಕೆ ನೇಣು ಹಾಕಿತ್ತಂತೆ. ಆವಾಗಿಂದ ಆ ದೆಯ್ಯ ಅದೇ ಮರದಲ್ಲಿ ವಾಸ ಮಾಡ್ಕೊಂಡು, ಆ ದಾರೀಲಿ ಓಡಾಡೋ ಜನರಲ್ಲಿ ಯಾರೆಲ್ಲ ಡಕಾಯಿತರ ಹಾಗೆ ಕಾಣ್ತಾರೆ, ಅವರ ಮುಂದೆ ನೆಗೆದು, ಅವರನ್ನ ಸರಿಯಾಗಿ ಹೊಡ್ದು–ಬಡ್ದು ಹಿಂಸೆ ಕೊಡ್ತಿದ್ದನಂತೆ. ನಾನೂ ಕಳ್ಳನ ಥರಾ ಕಾಣ್ತಿದ್ನೇನೋ, ಒಂದ್ ರಾತ್ರಿ ನನ್ನ ಗಾಡಿ ಮುಂದೇನೂ ಅರಳೀಮರದಿಂದ ಜಿಗಿದು ದಾರಿಗಡ್ಡವಾಗಿ ನಿಂತು ಬಿಟ್ಟ.”

“ಏಯ್! ಇಳೀ ಗಾಡಿಯಿಂದ ಕೆಳಕ್ಕೆ. ನಾನಿವತ್ತು ನಿನ್ನ ಕೊಂದ್ ಬಿಡ್ತೀನಿ!”

ನಾನು ಬೆಚ್ಚಿದ್ದು ನಿಜಾ, ಆದ್ರೆ ಅವನ ಮಾತು ಯಾಕೆ ಕೇಳ್ಬೇಕು ಅಂದ್ಕೊಂಡು, “ನನಗೆ ಕೊಲೆಯಾಗೋಕೆ ಖಂಡಿತಾ ಇಷ್ಟ ಇಲ್ಲ, ನೀನೇ ನನ್ನ ಗಾಡಿ ಮೇಲೆ ಬಾ” ಅಂದೆ.

“ಸರಿಯಾದ ಗಂಡಸಿನ ಥರಾ ಮಾತನಾಡ್ದೆ ನೋಡು,” ಅಂದವನೇ ಬಿಪಿನ್ ನನ್ನ ಗಾಡಿ ಮೇಲಕ್ಕೆ ಜಿಗಿದು ಬಂದ, “ಹೇಳು, ನಾನ್ಯಾಕೆ ನಿನ್ನ ಕೊಲ್ಲಬಾರದು?”

“ಯಾಕಂದ್ರೆ ನಾನು ಡಕಾಯಿತ ಅಲ್ಲ”

“ಆದ್ರೆ ನೀನು ಡಕಾಯಿತನ ಥರವೇ ಕಾಣ್ತೀಯ, ಅಷ್ಟು ಸಾಕು”

“ಆದ್ರೆ ನನ್ನ ಕೊಂದು ನೀನು ಆಮೇಲೆ ಪಶ್ಚಾತ್ತಾಪ ಪಡ್ತೀಯ. ನಾನು ಹೆಂಡ್ತಿ–ಸಂಸಾರ ಇರೋ ಒಬ್ಬ ಬಡ ರೈತ!”

“ನೀನು ಬಡವ ಆಗಿರೋಕೆ ಸಾಧ್ಯಾನೇ ಇಲ್ಲ” ಬಿಪಿನ್ ಕಿರುಚಿದ.

“ಹಂಗಾದ್ರೆ ನನ್ನ ಶ್ರೀಮಂತನನ್ನಾಗಿ ಮಾಡು!”

“ಏನೂ? ನಿನ್ನನ್ನ ಶ್ರೀಮಂತನನ್ನಾಗಿ ಮಾಡೋಕೆ ನಂಗೆ ಶಕ್ತಿ ಇಲ್ಲಾ ಅಂತೀಯಾ?”

“ಹೌದು, ಇದೇ ಸವಾಲು ನಿನಗೆ. ನನ್ನನ್ನು ಶ್ರೀಮಂತನನ್ನಾಗಿ ಮಾಡಿ ತೋರ್ಸು!”

“ಸರಿ ಹಂಗಾದ್ರೆ, ಗಾಡಿ ಹೊಡೀ” ಬಿಪಿನ್ ಹೇಳಿದ, “ನಾನೂ ನಿಂಜೊತೆ ಹಳ್ಳಿಗೆ ಬರ್ತೀನಿ”

ಹೀಗೆ ನಾನು ನನ್ನ ಗಾಡಿ ಹೊಡ್ಕೊಂಡು ಬಿಪಿನನನ್ನು ನನ್ನ ಪಕ್ಕ ಕೂರುಸ್ಕೊಂಡು ಹಳ್ಳಿ ಮನೆಗೆ ಬಂದೆ.

“ನಾನೆಲ್ಲ ಪ್ಲಾನು ಮಾಡಿದೀನಿ. ನಿನ್ನನ್ನು ಬಿಟ್ರೆ ಬೇರೆ ಯಾರಿಗೂ ನಾನು ಕಾಣೋದಿಲ್ಲ. ಮತ್ತೆ ಇನ್ನೊಂದ್ವಿಷ್ಯಾ, ನಾನು ಪ್ರತೀ ರಾತ್ರಿ ನಿನ್ನ ಜೊತೆಗೇ ಮಲಕ್ಕೋಬೇಕು. ಬೇರೆ ಯಾರಿಗೂ ಇದು ಗೊತ್ತಾಗ್ಬಾರ್ದು. ಯಾರಿಗಾದ್ರೂ ಹೇಳಿದ್ಯೋ ನಿಂತ್ನಿಲ್ಲಿಗೇ ಕೊಂದ್ಹಾಕ್ಬಿಡ್ತೀನಿ ನಿನ್ನ!”

“ಚಿಂತೆ ಮಾಡ್ಕೋಬೇಡ, ನಾನ್ಯಾರಿಗೂ ಹೇಳೋಲ್ಲ”

“ಒಳ್ಳೇದು, ನಂಗೂ ನಿಂಜೊತೆ ಇರೋಣಾ ಅನಿಸ್ತಿದೆ, ಅರಳೀಮರದ ಒಬ್ಬಂಟಿ ಜೀವನ ನನ್ಗೂ ಬೇಸರಾಗಿ ಹೋಗಿತ್ತು!”

“ಹೀಗೇ ಬಿಪಿನ್ ನನ್ಜೊತೆ ಇರೋಕ್ ಶುರುಮಾಡಿದ, ನಾವಿಬ್ರೂ ಚೆನ್ನಾಗಿ ಹೊಂದ್ಕೊಂಡ್ ಹೋಗ್ತಾ ಇದ್ದೆವು. ಅವನು ಹೇಳಿದ್ದು ಸುಳ್ಳಾಗಿರಲಿಲ್ಲ. ನಾನು ಶ್ರೀಮಂತ ಆದೆ. ದುಡ್ಡು ಅನ್ನೋದು ಎಲ್ಲೆಲ್ಲಿಂದ ಸಾಧ್ಯವಿತ್ತೋ–ಇರಲಿಲ್ವೋ ಅವೆಲ್ಲ ಕಡೆಯಿಂದ್ಲೂ ಹರಿದು ಬರೋಕೆ ಶುರುವಾಯ್ತು. ನಾನು ಇನ್ನೊಂದಿಷ್ಟು ಹೊಲ, ಗದ್ದೆ, ದನ ಖರೀದಿ ಮಾಡ್ದೆ. ನಮ್ಮಿಬ್ಬರ ಗೆಳೆತನ ಚೆನ್ನಾಗೇ ಇತ್ತು. ಇವೆಲ್ಲದರ ಮಧ್ಯೆ ನನ್ನ ಪರಿಚಯಸ್ಥರಿಗೆ–ನೆಂಟರಿಷ್ಟರಿಗೆ ಇದೆಲ್ಲಿಂದ ಇವ್ನಿಗೆ ಇಷ್ಟೊಂದು ದುಡ್ಡು ಬರ್ತಾ ಇದೆಯಪ್ಪಾ ಅನ್ನೋ ಕುತೂಹಲ ಶುರುವಾಯ್ತು, ಜೊತೆಗೆ ನನ್ನ ಹೆಂಡತಿಗೆ ರಾತ್ರಿಗಳಲ್ಲಿ ಅವಳ ಜೊತೆ ನಾನು ಮಲಗ್ತಾ ಇಲ್ಲ ಅಂತಾ ಬೇಜಾರು ಶುರುವಾಯ್ತು. ಅವಳನ್ನ ದೆಯ್ಯ ಮಲಗಿದ್ದ ಹಾಸಿಗೇಲೇ ಜೊತೆಗೆ ಮಲಗಿಸಿಕೊಳ್ಳೋಕೆ ನಂಗೆ ಇಷ್ಟ ಇರ್ಲಿಲ್ಲ, ಜೊತೆಗೆ ಬಿಪಿನ್–ದು ಬೇರೆ ನನ್ನ ಪಕ್ಕದಲ್ಲೇ ಮಲಕ್ಕೋಬೇಕೆಂಬ ಕರಾರು. ಮೊದಮೊದಲಿಗೆ “ನಂಗೆ ಹುಶಾರಿಲ್ಲ, ಅದಕ್ಕೇ ವರಾಂಡಾದಲ್ಲಿ ಬೇರೆ ಮಲಗ್ತೀನಿ” ಅಂದೆ. ಆಮೇಲಾಮೇಲೆ ದನಗಳ್ಕಳ್ರಿದಾರೆ, ಅದಕ್ಕೋಸ್ಕರ ಕಾವಲಿಗೆ ಅಂತಾ ಬೇರೆ ಮಲಗ್ತೀನಿ” ಅಂತಾ ಕೊಟ್ಟಿಗೇಲಿ ಬಿಪಿನ್ ಜೊತೆ ಮಲಗಲಾರಂಭಿಸಿದೆ.”

“ನನ್ನ ಹೆಂಡ್ತಿ, ಕೆಲವೊಮ್ಮೆ ಅರ್ಧ ರಾತ್ರೀಲೆದ್ದು ನನ್ನ ಮೇಲೆ ಜಾಸೂಸಿ ಮಾಡ್ತಾಯಿದ್ಲು, ಬೇರೆ ಯಾವ ಹೆಂಗ್ಸಿನ ಹಿಂದೆ ಬಿದ್ದಿದೀನೇನೋ ಅಂತಾ. ಯಾವಾಗ್ಲೂ ದನದ ಕೊಟ್ಟಿಗೇಲಿ ಒಬ್ಬೊಬ್ನೇ ಮಲ್ಗಿರೋದು ಕಾಣ್ತಾ ಇತ್ತಾ, ಕೊನೇಗೆ ಇದ್ಯಾವುದೂ ಅರ್ಥಾ ಆಗದೇ ಅವಳು ಇದನ್ನೆಲ್ಲ ಅವಳ ತವರಿನವರಿಗೆ ಹೇಳಿಕೊಂಡಳು, ಅವರೆಲ್ಲ ನನ್ನ ಹತ್ರ ಬಂದು, ಇದಕ್ಕೆಲ್ಲ ವಿವರಣೆ ಕೇಳಿದ್ರು. ಜೊತೆಗೆ ನನ್ನ ನೆಂಟರಿಷ್ಟರು ಬೇರೆ ನನ್ನ ಸಿರಿತನದ ಬಗ್ಗೆ ಪ್ರಶ್ನೆಗಳನ್ನ ಕೇಳೋಕೆ ಶುರುಮಾಡಿದ್ರು. ಚಿಕ್ಕಪ್ಪ–ದೊಡ್ಡಪ್ಪಂದಿರು, ಭಾವ ಮೈದುನರಾದಿಯಾಗಿ ಎಲ್ರೂ ಒಂದಿನ ನನ್ನ ಮನೆಗೆ ಬಂದಿಳಿದವರೇ ವರಾತ ಶುರು ಹಚ್ಕೊಂಡ್ರು.”

“ನನಗೆ ಸಿಟ್ಟು ಬಂದು, “ನಾನು ಸಾಯೋದು ನಿಮಗಿಷ್ಟಾನಾ? ನಾನೇನಾದ್ರೂ ನನ್ನ ರಹಸ್ಯ ಹೇಳಿದ್ರೆ ಈಗಿಂದೀಗ್ಲೇ ಸತ್ತು ಬೀಳ್ತೀನಿ ಗೊತ್ತಾ?” ಅಂತಾ ಕಿರುಚಿದೆ. ಆದ್ರೆ ಅವ್ರೆಲ್ಲ ನಿಜಾ ಮುಚ್ಚಿಡೋಕೆ ಪ್ರಯತ್ನ ಪಡ್ತಾ ಇದಾನೆ ಅಂತಾ ನಕ್ಕರು. ಎಲ್ಲವನ್ನೂ ನನ್ನಲ್ಲೇ ಇಟ್ಕೊಳ್ಳೋಕೆ ಪ್ರಯತ್ನ ಪಡ್ತಾ ಇದೀನಿ ಅಂದ್ಕೊಂಡ್ರು. ನನ್ನ ಹೆಂಡ್ತೀ ಕಡೆಯವರು, ನಾನು ಬೇರ್ಯಾವುದೋ ಹೆಂಗ್ಸಿನ ಸಹವಾಸಕ್ಕೆ ಬಿದ್ದಿದೀನಿ ಅಂದ್ಕೊಂಡ್ರು. ಕೊನೆಗೆ ಇವೆಲ್ಲದರಿಂದ ಬೇಸತ್ತು ನಾನು ನಿಜ ಹೇಳಲೇ ಬೇಕಾಯ್ತು.”

“ಅವರ್ಯಾರೂ ನನ್ನೀ ಸತ್ಯವನ್ನ ನಂಬಲಿಲ್ಲ. ಆದ್ರೆ ಸ್ವಲ್ಪ ದಿನ ಮಾತಾಡ್ಕೊಳ್ಳೋಕೆ ಒಳ್ಳೇ ಸರಕು ಸಿಗ್ತು ಅಂತ ಖುಷಿಯಾಗಿ ಹೊರಟು ಹೋದ್ರು. ಅವತ್ತು ರಾತ್ರಿ ಬಿಪಿನ್ ಕೊಟ್ಟಿಗೇಲಿ ನನ್ಜೊತೆ ಮಲ್ಗೋಕೆ ಬರಲಿಲ್ಲ, ಅದರ ಮುಂದಿನ ದಿನವೂ ಬರಲಿಲ್ಲ, ಮತ್ತ್ಯಾವತ್ತೂ ಬರಲೇ ಇಲ್ಲ. ನನ್ಗೆ ಹೆದ್ರಿಕೆ ಆಗ್ತಾ ಇತ್ತು. ನಾನು ಮಲಗಿದ್ದಾಗ ಅವ್ನೇನಾದ್ರೂ ಬಂದು ನನ್ನ ಖೂನಿ ಮಾಡಿದ್ರೆ ಅಂತ. ಆದ್ರೆ ಅವನು ನನ್ನನ್ನು ಶಾಶ್ವತವಾಗಿ ತೊರೆದು ಹೋಗಿದ್ದಾ ಅನ್ಸುತ್ತೆ. ನನಗೆ ಗೊತ್ತಾಯ್ತು ನನ್ನೆಲ್ಲ ಒಳ್ಳೇ ದಿನಗಳೂ ಕೊನೆಯಾದ್ವು ಅಂತ, ನಾನು ಸುಮ್ಮನೇ ವಾಪಸ್ಸು ನನ್ನ ಹೆಂಡ್ತೀ ಜೊತೆ ಕೋಣೆಯೊಳಗೆ ಮಲಗಲಾರಂಭಿಸಿದೆ.”

ಮುಂದೊಮ್ಮೆ ಅರಳೀಮರದ ಹಾದೀಲಿ ರಾತ್ರಿ ಹೊತ್ತು ಸಂತೆಯಿಂದ ವಾಪಸ್ಸು ಬರ್ತ ಇದ್ದಾಗ ಬಿಪಿನ್ ನನ್ನೆದುರು ಕಾಣಿಸಿಕೊಂಡ. ನನ್ನ ಗಾಡಿ ಎತ್ತುಗಳನ್ನ ತಡೆ ಹಾಕಿಕೊಂಡು ಕಿರುಚಿದ, “ಮೋಸದ ಗೆಳೆಯ ನೀನು! ನಾನು ನಿಂಗೆ ಬೇಕಾದದ್ದನೆಲ್ಲ ಕೊಟ್ಟೆ, ಆದ್ರೆ ನೀನು ನಂಗೆ ಮೋಸ ಮಾಡಿದೆ”

“ನನ್ನನ್ನ ಕ್ಷಮಿಸು,” ನಾನವನನ್ನ ಬೇಡಿಕೊಂಡೆ, “ಬೇಕಾದ್ರೆ ನನ್ನ ಕೊಂದು ಬಿಡು”

“ಇಲ್ಲ, ನಾನು ನಿನ್ನನ್ನ ಕೊಲ್ಲೋದಿಲ್ಲ. ತುಂಬಾ ದಿನಗಳ ತನಕ ನಾವುಗಳು ಸ್ನೇಹಿತರಾಗಿದ್ವಿ. ಆದ್ರೆ ನಿಂಗೆ ಸಜೆ ಖಂಡಿತಾ ಕೊಡ್ತೀನಿ” ಹೀಗಂದವನೇ ದಪ್ಪನೆಯ ಬಾರುಕೋಲೆತ್ತಿಕೊಂಡು ನನ್ನ ಬೆನ್ನ ಮೇಲೆ ಬೆನ್ನ ಹುರಿ ಬಾಗಿಕೊಳ್ಳುವ ಹಾಗೆ ಸರಿಯಾಗಿ ಮೂರೇಟು ಬಿಟ್ಟ ಅಷ್ಟೇ,” ಗಣಪತ್ ತನ್ನ ಕತೆ ಮುಗಿಸಿದ,

“ಆವತ್ತಿನಿಂದ ನನ್ನ ಬೆನ್ನು ಗೂನು ಬಿದ್ದು ಹೋಯ್ತು. ಇಪ್ಪತ್ತುವರ್ಷದಿಂದ ನಾನು ಹೀಗೇ ಇದೀನಿ. ನನ್ನ ಹೆಂಡ್ತಿ ನನ್ನ ಬಿಟ್ಟು ವಾಪಸ್ಸು ತವರಿಗೆ ಹೊರಟುಹೋದಳು, ನನ್ಗೆ ಹೊಲ ಗದ್ದೆ ಮಾಡೋಕೆ ಆಗಲಿಲ್ಲ. ನನ್ನ ಹಳ್ಳಿ ಬಿಟ್ಟು ಹೀಗೇ ಊರೂರು ಅಲೀತಾ

ಹೊಟ್ಟೆಪಾಡಿಗೆ ಭಿಕ್ಷೆ ಬೇಡಲಾರಂಭಿಸಿದೆ. ಹೀಗೇ ಈ ಪೀಪಲ್–ನಗರಕ್ಕೂ ಬಂದೆ, ಇಲ್ಲೇ ಇದ್ದುಬಿಡಬೇಕಂತಾ ನಿರ್ಧಾರ ಮಾಡಿದೆ. ಬೇರೆ ಪಟ್ಟಣಗಳಿಗೆ ಹೋಲಿಸಿದ್ರೆ ಇಲ್ಲೀ ಜನ ದಯಾಳುಗಳು, ಯಾಕಂದ್ರೆ ಅವರ ಹತ್ರಾನೇ ಅಷ್ಟೇನೂ ಜಾಸ್ತಿ ಇಲ್ಲ."
ಗಣಪತ್ ಕತ್ತೆತ್ತಿ ನನ್ನನ್ನು ನೋಡಿ, ನನ್ನ ನಾಲ್ಕಾಣೆಗೋಸ್ಕರ ಕಾಯುತ್ತಿರುವವನಂತೆ ನಸುನಕ್ಕ.

"ಈ ಕತೇನಾ ನಾನು ನಂಬೋಕೆ ಸಾಧ್ಯಾನೇ ಇಲ್ಲ ಮಾರಾಯಾ! ಆದ್ರೆ ಒಳ್ಳೇ ಕತೆ ಹೆಣ್ದಿದೀಯಾ ನೀನು! ತಗೋ ನಿನಗೆ ಬರಬೇಕಾದ ನಾಲ್ಕಾಣೆ"

"ಬೇಡ, ಬೇಡ!" ಬೇಜಾರಾದವನಂತೆ ಗಣಪತ್ ಹಿಂದೆ ಸರಿದ, "ನೀವು ನನ್ನ ನಂಬಲಿಲ್ಲಾಂದ್ರೆ ದುಡ್ಡು ನೀವೇ ಇಟ್ಕೊಳ್ಳಿ, ಕೇವಲ ನಾಲ್ಕಾಣೆಗೋಸ್ಕರ ನಾನು ನಿಮಗೆ ಸುಳ್ಳಿನ ಕಟ್ಟು ಕತೆ ಹೇಳಲಿಲ್ಲ!"

ಕೊನೆಗೆ ಒತ್ತಾಯದಿಂದೆಂಬಂತೆ ನನ್ನ ಕೈಯಿಂದ ನಾಲ್ಕಾಣೆ ತೆಗೆದುಕೊಂಡು, ನನ್ನನ್ನು ಹರಸಿ, ತನ್ನ ಗೂನು ಬೆನ್ನಿನ–ಕುಂಟು ನಡುಗೆಯಲ್ಲಿ ಮಾಯವಾದ.

ನನಗೆ ಗೊತ್ತಿತ್ತು, ಇವ್ನು ದೊಡ್ಡ ಕಟ್ಟು ಕತೇನೇ ಕಟ್ತಾ ಇದಾನೆ ಅಂತಾ. ಆದ್ರೆ ಹೇಳೋಕಾಗೋದಿಲ್ಲ ನೋಡಿ, ಯಾರಿಗೆ ಗೊತ್ತು, ಅವನು ಬಿಪಿನ್ ಅನ್ನೋ ದೆಯ್ಯಾನ ನಿಜವಾಗ್ಯೂ ಕಂಡಿದ್ದಿರಬಹುದು. ಅವನಿಗೆ ನಾನು ನಾಲ್ಕಾಣೆ ಕೊಟ್ಟಿದ್ದೂ ಒಳ್ಳೇದಾಯ್ತು ಅಂದ್ಕೊಳ್ಳಿ, ಮೊದಲೇ ಅವನು ಸಿ–ಐ–ಡಿಗೆ ಕೆಲ್ಸ ಮಾಡೋ ಮನುಷ್ಯಾ!

(ಈ ಕತೆ ಸುಪ್ರಸಿದ್ಧ ಆಂಗ್ಲೋ–ಇಂಡಿಯನ್ ಲೇಖಕ, ಸಣ್ಣಕತೆಗಳ ಬರಹಗಾರ "**ರಸ್ಕಿನ್ ಬಾಂಡ್**" ರ "**ದೆಲ್ಲಿ ಈಸ್ ನಾಟ್ ಫಾರ್**" ಅನ್ನೋ ನೀಳ್ಗತೆಯ ಒಂದು ಅಧ್ಯಾಯದ ಕನ್ನಡೀಕರಣ.)

**ಹ್ಯಾವ್ ಎ ನೈಸ್ ಡೇ**

**ಶಿವಕುಮಾರ ಕೆ. ಎಸ್.** shivuks@gmail.com